International Journal of Kannada Research
www.kannadajournal.com

**ISSN: 2454–5813**
IJKR 2018; 4(3): 87-89
© 2018 IJKR
www.kannadajournal.com
Received: 17-05-2018
Accepted: 18-06-2018

**ಕೆಂಪಣ್ಣ ಶಿವಲಿಂಗಪ್ಪ ಪರವ್ವಗೋಳ**
ಸಂಶೋಧನಾ ವಿದ್ಯಾರ್ಥಿ,
ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ
ವಿಶ್ವವಿದ್ಯಾಲಯ, ಹಂಪಿ

**Correspondence**
**ಕೆಂಪಣ್ಣ ಶಿವಲಿಂಗಪ್ಪ ಪರವ್ವಗೋಳ**
ಸಂಶೋಧನಾ ವಿದ್ಯಾರ್ಥಿ,
ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ
ವಿಶ್ವವಿದ್ಯಾಲಯ, ಹಂಪಿ

# ಗೋಕಾವಿ ನಾಡಿನ ಜನಪದ ಚರಿತ್ರೆಯ ಲಾವಣಿಕಾರರು

**ಕೆಂಪಣ್ಣ ಶಿವಲಿಂಗಪ್ಪ ಪರವ್ವಗೋಳ**

ನಮ್ಮ ನಾಡಿನಲ್ಲಿ ಜಾನಪದ ಸಾಹಿತ್ಯವು ವಿವಿಧ ಮುಖಗಳಿಂದ ಬೆಳೆದು ಬಂದಿದೆ. ಶಿಷ್ಟ ಸಾಹಿತ್ಯದಂತೆ ಜಾನಪದ ಸಾಹಿತ್ಯವು ಒಂದು ಕಲೆ. ಕವಿಯ ಪ್ರತಿಭಾ ಸಾಮರ್ಥ್ಯದಿಂದ ಕಾವ್ಯ ಸೃಷ್ಟಿಯಾಗುವಂತೆ ಜಾನಪದ ಸಾಹಿತ್ಯವು ಜನತೆಯ ಬಾಯಲ್ಲಿ ಇರುತ್ತದೆ. ಒಬ್ಬರಿಂದ ಒಬ್ಬರಿಗೆ ಹಸ್ತಾಂತರವಾಗುತ್ತ ಮುಂದುವರೆಯುತ್ತದೆ. ಈ ದಿಸೆಯಲ್ಲಿ ಅವಲೋಕನ ಮಾಡಿದಾಗ ಲಾವಣಿ ಸಾಹಿತ್ಯವು ಚಾರಿತ್ರಿಕ, ಐತಿಹಾಸಿಕ ದಾಖಲೆಗಳನ್ನು ನಿರ್ಮಿಸುವಲ್ಲಿ ಹುಟ್ಟಿಕೊಂಡಿವೆ. ಪದ್ಯರೂಪದ ಅತ್ಯಂತ ಪ್ರಾಚೀನ ರೂಪವನ್ನು ಹೊಂದಿದ ಒಂದು ಪ್ರಕಾರವನ್ನು ಲಾವಣಿಗಳೆಂದು ಕರೆಯುತ್ತೇವೆ. ನಮ್ಮ ಸಾಹಿತ್ಯ ನಿಜವಾದ ಸಾಂಪ್ರಾದಾಯಿಕ ಜಾತಿಯ ಲಾವಣಿಗಳಿಂದ ಸಮೃದ್ಧವಾಗಿವೆ. ಬೆಳಗಾವಿ ಜಿಲ್ಲೆಯ ಲಾವಣಿ ಕಲಾವಿದರ ಸಂಖ್ಯೆ ಅಪಾರವಾಗಿದೆ. ಅದರಲ್ಲಿಯೇ ಗೋಕಾಕ ಪರಿಸರದಲ್ಲಿ ಅನೇಕ ಜನ ಲಾವಣಿಕಾರರು ಬರೆಯುವುದರ ಜೊತೆಗೆ ಹಾಡುತ್ತಿದ್ದರು. ಕೆಲವರು ಹಾಡುತ್ತಿದ್ದರು ಬರೆಯಲು ಬರುತ್ತಿರಲಿಲ್ಲ. ವಿದ್ಯಾವಂತರು ಅವರ ಹಾಡುಗಳನ್ನು ತಮ್ಮ ಹಸ್ತಾಕ್ಷರಗಳಿಂದ ಬರೆದಿರುವುದನ್ನು ನೋಡುತ್ತೇವೆ. ಶಿಷ್ಟಸಾಹಿತ್ಯ ಕೃತಿಯು ಬಹಳ ತೀವ್ರಗತಿಯಿಂದ ಸಾಗುತ್ತಿರುವಾಗ ಗ್ರಾಮೀಣ ಪರಿಸರದಲ್ಲಿ ವಿಪುಲವಾದ ಜನಪದ ಸಾಹಿತ್ಯವು ರಚನೆಗೊಂಡಿದ್ದು ಗಮನಾರ್ಹ ಸಂಗತಿಯಾಗಿದೆ.
ನನ್ನ ಕ್ಷೇತ್ರಕಾರ್ಯ ಸಂದರ್ಭದಲ್ಲಿ ದೊರೆತ ಮಾಹಿತಿಯಂತೆ ಪ್ರಸ್ತುತ ತಾಲೂಕಿನಲ್ಲಿ ಸಾಕಷ್ಟು ಜನ ಲಾವಣಿಕಾರರು ಲಾವಣಿಗಳನ್ನುರಚನೆ ಮಾಡಿದ್ದು ಕಂಡುಬರುತ್ತದೆ.

### ೧. ಗೋಕಾಕದ ಸಾತು – ಕ್ಯಾಮಣ್ಣ (೧೮೫೦–೧೯೩೮)

ಸಾತು – ಕ್ಯಾಮಣ್ಣ ಗೋಕಾಕದಲ್ಲಿ ಜನಿಸಿದವನು. ತನ್ನ ಆಯುಷ್ಯದ ೮೦ನೆಯ ವರ್ಷದಲ್ಲಿ ತೀರಿಕೊಂಡನು. ಜೀವನಪರ್ಯಂತ ಲಾವಣಿಗಳನ್ನು ರಚಿಸಿದನು. ಸತ್ಯವತಿ ಲಾವಣಿ, ಕಬೀರದಾಸ ಲಾವಣಿ, ದಶಾವತಾರ ಲಾವಣಿ ಮುಂತಾದವುಗಳನ್ನು ರಚಿಸಿದ್ದಾನೆ. ಡಾ. ನಿಂಗಣ್ಣ ಸಣ್ಣಕ್ಕಿ ಅವರು ಈತನ ಲಾವಣಿಗಳನ್ನು ಸಂಪಾದಿಸಿ ೨೦೦೪ರಲ್ಲಿ ಪ್ರಕಟಿಸಿದ್ದಾರೆ. ಆದರೆ ಇನ್ನೂ ಐದು ಹೊಸ ಅಪ್ರಕಟಿತ ಲಾವಣಿಗಳು ನನ್ನ ಕ್ಷೇತ್ರಕಾರ್ಯದಲ್ಲಿ ದೊರಕಿವೆ.

### ೨. ಗೋಕಾಕದ ಅನಂತಾಚಾರ್ಯ (೧೮೦೦–೧೮೮೦)

೧೮ನೆಯ ಶತಮಾನದಲ್ಲಿ ಬದುಕಿದ ಅನಂತಾಚಾರ್ಯ ಅನಂತಾದ್ರೀಶ ಎಂಬ ಮುದ್ರಿಕೆಯಲ್ಲಿ ನೂರಾರು ಅನುಭವ ಪದಗಳನ್ನು ರಚಿಸಿದ್ದಾನೆ. ಸಂಸ್ಕೃತ ಪಂಡಿತನೂ ಸಂಗೀತ ಶಾಸ್ತ್ರಜ್ಞನೂ ಆಗಿದ್ದನೆಂದು ತಿಳಿದು ಬರುತ್ತದೆ. ಹತ್ತಾರು ಬಯಲಾಟಗಳೂ ಈತನಿಂದ ಸೃಷ್ಟಿಯಾಗಿವೆ. ಪಾರಿಜಾತ ಆಟದಲ್ಲಂತೂ ಇವನಿಗೆ ವಿಶೇಷ ಒಲವು ಇದ್ದಿರುವದನ್ನು ಕಾಣಬಹುದು. ನೂರಕ್ಕೂ ಅಧಿಕ ಲಾವಣಿಗಳನ್ನು ಬರೆದಿದ್ದಾನೆ. ಅನಂತಾದ್ರೀಶರು ಬರೆದ ಶಿವ ಪಾರಿಜಾತ ಮತ್ತು ವೆಂಕಟೇಶ ಪಾರಿಜಾತ ಸಚಿತ್ರ ಹಸ್ತಪ್ರತಿಗಳು ಬೆಂಗಳೂರಿನಲ್ಲಿ ವಾಸವಾಗಿರುವ ಇವರ ಮೊಮ್ಮಗಳ ಹತ್ತಿರ ನೋಡಲು ದೊರೆಯುತ್ತವೆ.

### ೩. ಗೋಕಾವಿಯ ಮಲ್ಲೇಶಪ್ಪ (೧೮೩೨–೧೯೧೭)

ಮಲ್ಲೇಶಪ್ಪನು ಬೆಳ್ಳಿ–ಬಂಗಾರದ ಕೈಕುಸುರಿನ ಕಲಾವಂತ ಜನಪದ ಕವಿಯಾಗಿಯು ಈ ನಾಡಿನಲ್ಲಿ ಚಿರಪರಿಚಿತನಾಗಿದ್ದಾನೆ. ಮನೆಯ ಉದ್ಯೋಗದ ಜೊತೆಗೆ ಜನಪದ ಹಾಡುಗಳನ್ನು ಕಟ್ಟಿದ್ದಾನೆ. ಅದೇ ಊರಿನ ಸಾಂಬಣ್ಣನ ಜೊತೆಗೆ ಹಾಡುಗಳನ್ನು ರಚಿಸಿ ಹಾಡುತ್ತಿದ್ದನು.

ನಾಗೇಶ ಪಂಗಡಕ್ಕೆ ಸೇರಿದ ಕವಿ ಇವನಾಗಿದ್ದಾನೆ. ನೂರಾರು ಲಾವಣಿಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಕೌಂಡ್ಲಿಕ, ಗೆಳೆ-ಮೈತ್ರು ರಾಮ-ಭೀಮ, ವಟಸಾವಿತ್ರಿ ಮೊದಲಾದ ಲಾವಣಿಗಳು ಪ್ರಸಿದ್ಧಿ ಪಡೆದಿವೆ.

**೪. ಗೋಕಾವಿಯ ಮಲ್ಲಪ್ಪ (೧೮೫೦-೧೯೦೦):**

ಗೋಕಾಕ ಸಮೀಪದ ಫಾಲ್ಸ ಗಿರಿಣಿಯೊಂದರಲ್ಲಿ ಕಾರ್ಮಿಕನಾಗಿ ಸೇವೆಸಲ್ಲಿಸಿದ ಯಲ್ಲಪ್ಪ ಬಹುಶಃ ಮೂಲತಃ ಅಡಿಬಟ್ಟಿ ಗ್ರಾಮದವನಿರಬೇಕು. ೧೮೭೦ರ ಸುಮಾರು ನಡೆದ ಕಟ್ಟಿಚೆನ್ನನ ಚರಿತ್ರೆಯನ್ನು ಆಯ್ದುಕೊಂಡು ಲಾವಣಿಯಲ್ಲಿ ಹಾಡಿದ್ದಾನೆ. 'ಗಿರಣಿ ಯಲ್ಲಣ್ಣ' ಎಂಬ ಮುದ್ರಿಕೆಗಳು ಈತನ ಹಾಡುಗಳಲ್ಲಿ ಬರುತ್ತವೆ.

> 'ಕಟ್ಟಿಯ ಚೆನ್ನನ ಪ್ರಾಬಲ್ಯ ಎಷ್ಟಂತ ಹೇಳಲಿ ನಾನು
> ಶ್ರೇಷ್ಠನಾಗಿ ಹೋದ ಅಂವ ಈ ಮೃರ್ತ್ಯದೊಳಗ
> ದುಷ್ಟದುರ್ಯೋಧನನಕ್ಕಿಂತ ಸಿಟ್ಟ ಅವನ ಹೊಟ್ಟೆಯೊಳಗ
> ಭಾಳ
> ಬಂಟಸ್ತನದ ಪದವಿ ಇತ್ತ ಅವನ ಮನಸ್ಸಿನೊಳಗ'

**೫. ಗೋಕಾದ ಲಕ್ಷ್ಮಣ (೧೮೫೦-೧೯೪೦)**

ಗೋಕಾಕದ ಪತ್ತಾರ ಮಲ್ಲೇಶಪ್ಪನ ಮಗನಾಗಿರುವ ಲಕ್ಷ್ಮಣನ ಉದ್ಯೋಗ ಪತ್ತಾರಿಕೆ ತಂದೆಯಂತೆ ಜನಪದ ಲಾವಣಿಗಳನ್ನು ರಚಿಸಿದ ಈತನು ನಾಗೇಶಿ ಪಂಗಡದವನು. ಗೋಕಾಕ ಬಿಟ್ಟು ಢವಳೇಶ್ವರ ಸೇರಿದ್ದ ಲಕ್ಷ್ಮಣನಿಗೆ ಅಲ್ಲಿಯ ಗುಡವೀಶ್ವರನ ಕೃಪಾರ್ಶೀವಾದದಿಂದ ಹಾಡು ರಚಿಸುವ ಪ್ರೇರಣೆಯಾಯಿತಂತೆ. ತನ್ನ ಆತ್ಮೀಯ ಸ್ನೇಹಿತನಾದ ರಾಚಯ್ಯನಿಂದಲೂ ಪ್ರಭಾವಿತನಾಗಿ ಲಕ್ಷ್ಮಣ ಶ್ರೇಷ್ಠ ಜನಪದ ಹಾಡುಗಾರನೆನಿಸಿದನು. ಈತನನ್ನು ಲಚ್ಚಪ್ಪ ಎಂದೇ ಕರೆಯುತ್ತಿದ್ದರು. ಜೀವದ ಗೆಳೆಯ ರಾಚಯ್ಯನನ್ನು ಗುರುಗುಡದೀಶ್ವರನನ್ನು ತನ್ನ ಹಾಡುಗಳಲ್ಲಿ ಸ್ಮರಿಸಿದ್ದಾನೆ. ತಂದೆಯನ್ನು ಸ್ಮರಿಸಿದ್ದನ್ನು ಕಾಣಬಹುದು. ಇತನು ಬರೆದ ಲಾವಣಿಗಳಲ್ಲಿ 'ಕೃಷ್ಣ ಪಾರಿಜಾತ' ಸಿರಿಯಾಳ ಸತ್ಯ ಪರೀಕ್ಷಾ 'ಶಿಬಿ ಚಕ್ರವರ್ತಿ', 'ದ್ರೌಪದಿ ವಸ್ತ್ರಾಪಹರಣ' ಮೊದಲಾದ ಲಾವಣಿಗಳು ಇಂದಿಗೂ ಜನಪ್ರಿಯವಾಗಿವೆ.

**೬. ಮಮದಾಪೂರದ ಮಾರೋತ್ತೆಪ್ಪ (೧೮೮೦-೧೯೫೦)**

ಗೋಕಾಕ ನಗರದ ಪೂರ್ವಕ್ಕೆ ೧೦ ಕಿ.ಮೀ. ಹೋದರೆ ಮಮದಾಪೂರವಿದೆ. ಇದೇ ಗ್ರಾಮದ ಪ್ರಸಿದ್ಧ ಪೈಲವಾನ ಎನಿಸಿದ ಮಾರೋತೆಪ್ಪ ಜನಪದ ಕವಿ ಆಗಿದ್ದನ್ನು ನಾವು ಮರೆಯುವಂತಿಲ್ಲ. ಇಲ್ಲಿಯ ಭೀಮಪ್ಪ ಉಪ್ಪಾರಟ್ಟಿ ಎಂಬವರಿಗೆ ಮಗನಾಗಿ ೧೮೮೦ರಲ್ಲಿ ಜನಿಸಿದನು. ಇತನು ದೇವಾಂಗ ಜಾತಿಯವನು. ಉದ್ಯೋಗ ನೇಕಾರಿಕೆಯಾಗಿತ್ತು. ಕಲಿತದ್ದು ಕನ್ನಡ ೭ನೇ ತರಗತಿ. ಬಸವಗುರು ಎಂಬವರ ಸಾನಿಧ್ಯದಲ್ಲಿದ್ದುಕೊಂಡು ನೂರಾರು ಜನಪದ ಹಾಡುಗಳನ್ನು ರಚಿಸಿದ್ದಾನೆ. ಈತನ ಹಾಡುಗಳಲ್ಲಿ ತನ್ನೂರಿನ ಇಷ್ಟದೇವತೆಯಾದ ಮಾರೋತಿಯನ್ನು ಸ್ಮರಿಸಿದ್ದಾನೆ. ವೇದಾಂತದಲ್ಲೂ ಈತನಿಗೆ ವಿಶೇಷ ಆಸಕ್ತಿ ಇದ್ದಿರುವದನ್ನು ಗಮನಿಸಬಹುದು. ಕುಸ್ತಿಕಲೆಯಲ್ಲಿ ತುಂಬಾ ನಿಷ್ಣಾತ, ಹೋಳಿ ಹಾಡು, ಲಾವಣಿ ಹಾಗೂ ಕಲ್ಗಿತುರಾಯಿ ಪದಗಳನ್ನು ರಚಿಸಿದ್ದಾನೆ.

**೭. ಗೋಕಾಕದ ಬನಪ್ಪ (೧೮೮೪-೧೯೬೮)**

ಗೋಕಾಕದ ಹುನೂರು ಮನೆತನದ ಶಂಕ್ರಪ್ಪನವರಿಗೆ ೧೮೮೪ರಲ್ಲಿ ಬನಪ್ಪ ಹುಟ್ಟಿದನು. ಈತ ಕಲಿತದ್ದು ೪ನೇ ಇಯತ್ತೆ. ಅಲ್ಲದೆ ಮೋಡಿ ಕೂಡ ಓದಲು ಬರೆಯಲು ಕಲಿತಿದ್ದನು. ತನ್ನ ೮೦ ವರ್ಷಗಳ ತುಂಬು ಜೀವನದಲ್ಲಿ ಕಂಡುಂಡ ಅನುಭವ ಹಿರಿದಾದುದಾಗಿದೆ. ಈತನ ಲಾವಣಿಗಳಲ್ಲಿ ಅಂಥ ಹಲವಾರು ಘಟನೆಗಳನ್ನು ನಾವು ಕಾಣಬಹುದು. ಬನಪ್ಪನಿಗೆ 'ಬನೂ' ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ನಾಗೇಶಿ ಹಾಡುಗಳನ್ನು ರಚಿಸುತ್ತಿದ್ದನು. ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ನಾಯಕರ ಕುರಿತು ಹಲವಾರು ಲಾವಣಿಗಳನ್ನು ಬರದಿದ್ದಾನೆ. ಮನೆ ದೇವರು ಬಾದಾಮಿಯ ಬನಶಂಕರಿ ದೇವಿಯ ಮೇಲೆ ಲಾವಣಿಗಳನ್ನು ರಚಿಸಿದ್ದಾನೆ. ಬನುಕವಿ ಹಾಡತನ ಗೋಕಾವ್ಯಾಗ ಮಾಡಿದ ರಚನಾ ಎಂದು ಹಾಡಿನ ಕೊನೆಯಲ್ಲಿ ತನ್ನ ಊರು ಮತ್ತು ತನ್ನ ಹೆಸರನ್ನು ಹೇಳಿಕೊಂಡಿದ್ದಾನೆ.

**೮. ಯಾದವಾಡದ ಹುಸೇನಿ (೧೮೯೬-೧೯೭೬)**

ಗೋಕಾಕ ತಾಲೂಕಿನ ಯಾದವಾಡ ಗ್ರಾಮವು ಹುಸೇನಿಯ ಜನ್ಮಸ್ಥಳವಾಗಿದೆ. ಈ ಲಾವಣಿಕಾರನಿಗೆ ಹಾಡು ರಚಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದು ಚಿಕ್ಕಂದಿನಿಂದಲೇ ಓದು-ಬರಹ ಇವನದು ಕಡಿಮೆಯಾಗಿದೆ. ಹೆಣ್ಣು ಹೆಚ್ಚು ಎಂದು ಹಾಡು ಹೇಳುತ್ತಿದ್ದನು. 'ಯಾದವಾಡ ಹುಸೇನಿ' ಎಂಬ ಮುದ್ರಿಕೆ ಈತನ ಹಾಡುಗಳಲ್ಲಿ ಕಂಡುಬರುತ್ತದೆ.

**೯. ಹುಲಕುಂದ ಭೀಮಕವಿ (೧೯೦೯-೧೯೭೦)**

ಹುಲಕುಂದ ಭೀಮಕವಿ ಎಂದು ಹೆಸರಾದ ಇತನು ಅತ್ಯಂತ ಜನಪ್ರಿಯ ಲಾವಣಿಕಾರನೆಂದು ಕೀರ್ತಿಗೆ ಭಾಜನನಾಗಿದ್ದಾನೆ. ಕವಿಯ ನಿಜವಾದ ಹೆಸರು ಬಸಪ್ಪ, ಸಂಗಪ್ಪ ಬೆಟಗೇರಿ. ಕಲಿತದ್ದು ಕನ್ನಡ ೬ನೇ ಈಯತ್ತೆ. ಉದ್ಯೋಗ ನೇಕಾರಿಕೆ. ಇವರ ಮನೆಯ ಸಮೀಪವೇ ಭೀಮ ಎಂಬ ಸಾಧುವಿನ ಗದ್ದಿಗೆಯೊಂದು ಇದೆ. ಆ ಗದ್ದುಗೆಯ ದರ್ಶನ ಪಡೆದೇ ತನ್ನ ದೈನಂದಿನ ಕಾರ್ಯ ಕೈಕೊಳ್ಳುತ್ತಿದ್ದ. ಈ ಬಸಪ್ಪನಿಗೆ ಕಾವ್ಯ ರಚಿಸುವ ಶಕ್ತಿ ಬಂದದ್ದು ಆ ಸಾಧುವಿನ ಕೃಪೆಯಿಂದ ಎಂದು ಹೇಳುತ್ತಾನೆ. ಹೀಗಾಗಿ ತನ್ನ ಲಾವಣಿ ಹಾಡುಗಳಲ್ಲಿ ಸ್ಮರಿಸಿದ್ದಾನೆ. ಇವನ ತಂದೆಯೂ ಕವಿ ಇದ್ದ ಎನ್ನುವದನ್ನು ಮರೆಯುವಂತಿಲ್ಲ. ಹರಿಶ್ಚಂದ್ರ, ಮಾರ್ಕಂಡೇಯ, ಭಕ್ತ ಸಿರಿಯಾಳ ಮೊದಲಾದ ಬಯಲಾಟದ ಕತೆಗಳನ್ನು ಭೀಮಕವಿಯ ತಂದೆ ಸಂಗಪ್ಪ ರಚಿಸಿದ್ದಾನೆ. ತಂದೆಯ ಪ್ರಭಾವವೂ ಈತನ ಮೇಲಾಗಿದೆ. 'ಭೀಮಕವಿ' ಎಂಬುದು ಈತನ ಹಾಡುಗಳಲ್ಲಿ ಬರುವ ಮುದ್ರಿಕೆಯಾಗಿದೆ. ಭೀಮೇಶ, ಭೀಮ, ಭೀಮರಾಯ ಮೊದಲಾದ ಹೆಸರುಗಳೂ ಬರುತ್ತವೆ. ಭೀಮಕವಿ ಸ್ವತಃ ಹಾಡುಗಾರ. ಹೊಸೂರಿನ ಮೇಳಕಟ್ಟಿಕೊಂಡು ನಾಡಿನ ತುಂಬೆಲ್ಲಾ ಹಾಡುಗಳ ಮುಖಾಂತರ ರಾಷ್ಟ್ರಾಭಿಮಾನ ಹೆಚ್ಚಿಸಿದವನು. ಸ್ವತಃ ಕವಿಯಾಗಿ ನಿಂತಲ್ಲಿ ಕುಳಿತಲ್ಲಿ ಹಾಡುಗಳನ್ನು ರಚಿಸಿ ಹಾಡುವ ಕಲೆ ಕರಗತ ಮಾಡಿಕೊಂಡಿದ್ದನು. ಸಾವಿರಾರು ಲಾವಣಿಗಳನ್ನು ರಚಿಸಿದ್ದಾನೆ. ಸರಕಾರದ ಪ್ರಚಾರಕ್ಕೆ ಮೀಸಲಾದ ಹಾಡುಗಳಿಗಂತೂ ಲೆಕ್ಕವಿಲ್ಲ. ಸರ್ವೋದಯ ಪ್ರಚಾರದ ಹಾಡುಗಳೂ ಸಾಕಷ್ಟು ರಚಿತವಾಗಿವೆ. ೧೯೪೦ರಲ್ಲಿ ಜೈಲು ಕಂಡಬಂದ ಈ ಕವಿಗೆ ಸಾಯುವವರೆಗೂ ಸರಕಾರದ ಸಹಾಯಧನ ದೊರೆಯುತ್ತಿತ್ತು. ಭೀಮಕವಿ ಹಣಗಳಿಸದಿದ್ದರೂ ಹಾಡು ರಚಿಸಿ ಹೆಸರು ಗಳಿಸಿದರು. ಜಾನಪದ ಸಾಹಿತ್ಯ ಕ್ಷೇತ್ರಕ್ಕೆ ಅವಿಸ್ಮರಣೀಯ ಕೊಡುಗೆಯನ್ನು ನೀಡಿದ್ದಾರೆ.

**೧೦. ಹುನಕುಪ್ಪಿಯ ಕೃಷ್ಣದಾಸ (೧೯೩೦-೧೯೭೮)**

ಗೋಕಾಕ ತಾಲೂಕಿನ ಹುನಕುಪ್ಪಿಯ ಗ್ರಾಮದಲ್ಲಿ ಭೀಮದೇವನ ಮಗನಾಗಿ ಜನಸಿದ 'ಕೃಷ್ಣದಾಸ' ಎಂಬ ಕಾವ್ಯನಾಮದಿಂದ ಲಾವಣಿಗಳನ್ನು ರಚಿಸಿದ್ದಾನೆ. ಈತನು ಅನೇಕ ಲಾವಣಿಗಳನ್ನು, ಅಭಂಗಗಳನ್ನು ಕರ್ಬಲ್ ಪದಗಳನ್ನು ಬರದಿದ್ದಾನೆ. ೭೨ ಅಪ್ರಕಟಿತ

ಹೊಸ ಲಾವಣಿಗಳು ನನ್ನ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸಿಕ್ಕಿವೆ. ಕೃಷ್ಣದಾಸನು ಸ್ವಾತಂತ್ರ್ಯ ಚಳುವಳಿಯಲ್ಲಿ ಸೆರೆಮನೆ ವಾಸದಲ್ಲಿದ್ದಾಗ ಲಾವಣಿಗಳನ್ನು ರಚನೆ ಮಾಡಿದ್ದೇನೆ ಎಂದು ಸ್ವತಃ ಕವಿಯೇ ಹೇಳಿರುವದು ಗಮನಾರ್ಹ ಸಂಗತಿಯಾಗಿದೆ.

ಗೋಕಾಕ ನಾಡಿನಲ್ಲಿ ತತ್ವಪದಕಾರರು ದೊರೆಯುವದು ವಿರಳ. ಆದರೆ ಲಾವಣಿಕಾರರ ಸಂಖ್ಯೆ ಅಪಾರ. ಅಜ್ಞಾತ ಜನಪದ ಸಾಹಿತಿಗಳಿಗೆ ಲೆಕ್ಕವಿಲ್ಲ. ಕ್ಷೇತ್ರಕಾರ್ಯ ಕೈಕೊಂಡು ಶೋಧಿಸುವ ಕಾರ್ಯ ಮಾಡಿದರೆ ಇನ್ನೂ ಅನೇಕ ಲಾವಣಿಕಾರರು ದೊರೆಯುವ ಸಾಧ್ಯತೆ ಹೆಚ್ಚಾಗಿದೆ. ಸಂಗ್ರಹಿಸುವ, ರಕ್ಷಿಸುವ ಕೆಲಸ ನಡೆಯಬೇಕು. ಕೆಲವು ಲಾವಣಿಕಾರರ ಹಸ್ತಪ್ರತಿಗಳು ಅನಾಥ ಮಗುವಿನಂತೆ ಉಪೇಕ್ಷೆಗೆ ಒಳಗಾಗಿರುವುದು ಕಂಡುಬರುತ್ತದೆ. ಇಡೀ ಬೆಳಗಾವಿ ಜಿಲ್ಲೆಯ ತುಂಬೆಲ್ಲಾ ಸುತ್ತಾಡಿದಾಗ ೪೨ ಜನ ಲಾವಣಿಕಾರರು ದೊರೆತರೆ, ಅದರಲ್ಲಿ ೧೦ ಜನ ಗೋಕಾವಿ ನಾಡಿನವರು ಎಂಬುವುದನ್ನು ಹೆಮ್ಮೆಯಿಂದ ಹೇಳಬೇಕಾಗುತ್ತದೆ.

**ಪರಾಮರ್ಶನ ಗ್ರಂಥಗಳು**


೧. ಸಾತು ಕ್ಯಾಮಣ್ಣನ ಲಾವಣಿಗಳು – ಸಂ–ಡಾ.ನಿಂಗಣ್ಣ ಸಣ್ಣಕ್ಕಿ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨. ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ – ಸಂ–ನಿಂಗಣ್ಣ ಸಣ್ಣಕ್ಕಿ ವಿದ್ಯಾನಿಧಿ ಪ್ರಕಾಶನ, ಗದಗ.

೩. ತೇರದಾಳದ ಲಾವಣಿಕಾರರು – ಡಾ. ಸಂಗಮೇಶ ಬಿರಾದಾರ ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು.

೪. ಹಸ್ತಪ್ರತಿ ವ್ಯಾಸಂಗ – ೬ ಸಂ–ಡಾ. ಎಸ್. ಆರ್. ಚನ್ನವೀರಪ್ಪ

5. ಗೋಕಾವಿ ಸಿರಿ ಸಂಪದ – ಪ್ರೊ. ಚಂದ್ರಶೇಖರ ಅಕ್ಕಿ, ಮಹಾಲಿಂಗ ಮಂಗಿ. ಸ್ಮರಣ ಸಂಚಿಕೆ.